# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 225 |
| ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ |
| ಉತ್ತರಿಸಬೇಕಾದ ದಿನಾಂಕ | : | 10-12-2018 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದಲ್ಲಿ ಬೆಳೆದಿರುವ ಬೆಳೆಗಳು ಪ್ರಕೃತಿ ವಿಕೋಪಗಳಿಂದ ಹಾನಿಗೊಳಗಾದಾಗ ರೈತರ ನೆರವಿಗೆಂದು ಕೇಂದ್ರ ಸರ್ಕಾರವು ಜಾರಿಗೆ ತಂದಿರುವ "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ"ಯಲ್ಲಿ ರಾಜ್ಯದ ಬಹು ಮುಖ್ಯ ಬೆಳೆಯಾದ ಕಬ್ಬು ಬೆಳೆಯನ್ನು ಸೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಕಬ್ಬು ಬೆಳೆಯನ್ನು ಸೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) ಹಾಗಿದ್ದಲ್ಲಿ, "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ"ಯೊಳಗೆ ಕಬ್ಬಿನ ಬೆಳೆಯನ್ನು ಸೇರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು; ಕಬ್ಬಿನ ಬೆಳೆಯನ್ನು ಈ ಯೋಜನೆಯೊಳಗೆ ಸೇರಿಸಲಾಗುವುದು ಯಾವಾಗ; | 2016-17ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಈ ಯೋಜನೆಯು ಕ್ಷೇತ್ರಾಧಾರಿತ ಹಾಗೂ ಇಳುವರಿ ಆಧಾರಿತ ಯೋಜನೆಯಾಗಿದ್ದು, ಮಾರ್ಗಸೂಚಿಯನುಸಾರ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ಗ್ರಾಮ ಪಂಚಾಯತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ.<br>ಕಬ್ಬು ಬೆಳೆಯನ್ನು ಬೆಳೆ ವಿಮಾ ಯೋಜನೆಯಡಿ ಒಳಪಡಿಸುವ ಬಗ್ಗೆ ರಾಜ್ಯದಲ್ಲಿ 2002ರ ಮುಂಗಾರು ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಕಬ್ಬಿನ ಬೆಳೆಯನ್ನು ತಾಲ್ಲೂಕು ಮಟ್ಟದಲ್ಲಿ ಅಧಿಸೂಚಿಸಲಾಗಿತ್ತು. ಈ ಯೋಜನೆಯು ಇಳುವರಿ ಆಧಾರಿತ ಯೋಜನೆಯಾಗಿದ್ದು, ನಿಗಧಿಪಡಿಸಿದ ಪ್ರಾರಂಭಿಕ ಇಳುವರಿ (ಹಿಂದಿನ ವರ್ಷಗಳ ಇಳುವರಿಯ ಸರಾಸರಿ) ಹಾಗೂ ವಾಸ್ತವಿಕ ಇಳುವರಿಯಲ್ಲಿ (ಪ್ರಸ್ತುತ ಸಾಲಿನಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ದಾಖಲಾದ ಇಳುವರಿ) ವ್ಯತ್ಯಾಸವಿದ್ದರೆ ಮಾತ್ರ ಬೆಳೆ ವಿಮಾ ನಷ್ಟ ಪರಿಹಾರ ದೊರೆಯುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ಬೆಳೆ ವಿಮೆಯು **ಬೆಳೆ ಸಾಲ ಪಡೆಯುವ ರೈತರಿಗೆ ಕಡ್ಡಾಯ.** ಕಬ್ಬಿನ ಬೆಳೆಗೆ ಹೆಚ್ಚಾಗಿ ಎಲ್ಲಾ ರೈತರು ಬೆಳೆಸಾಲ ಪಡೆಯುತ್ತಾರೆ ಹಾಗೂ ಇದನ್ನು ನೀರಾವರಿ ಬೆಳೆಯಾಗಿ ಬೆಳೆಯುವುದರಿಂದ ಖಚಿತವಾದ ಇಳುವರಿ ಬರುತ್ತದೆ. 2002ರ ಮುಂಗಾರು ಹಂಗಾಮಿನಲ್ಲಿ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಹೆಚ್ಚಾಗಿದ್ದು, ಬೆಳೆ ವಿಮಾ ನಷ್ಟ ಪರಿಹಾರ ದೊರೆಯದಿರುವ ಕಾರಣ ಹಲವು ರೈತರು ನ್ಯಾಯಾಲಯದ ಮೊರೆಹೋಗಿದ್ದು, ನ್ಯಾಯಾಲಯವು ಕೇಸನ್ನು ವಜಾ ಮಾಡಿರುತ್ತದೆ. |

| | |
|---|---|
| | ಆದುದರಿಂದ ಹಲವಾರು ರೈತರು, ರೈತ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಕಬ್ಬು ಬೆಳೆಯನ್ನು ಬೆಳೆ ಸಾಲ ಪಡೆಯುವ ರೈತರಿಗೂ ಸಹ ಕಡ್ಡಾಯ ಮಾಡದೆ ಐಚ್ಛಿಕ ಮಾಡಬೇಕು ಅಥವಾ ಬೆಳೆ ವಿಮಾ ಯೋಜನೆಯಿಂದ ಕೈಬಿಡಬೇಕು ಎಂದು ಕೋರಿದ್ದು, ಕಬ್ಬು ಬೆಳೆಯನ್ನು ಬೆಳೆ ಸಾಲ ಪಡೆಯುವ ರೈತರಿಗೂ ಸಹ ಕಡ್ಡಾಯ ಮಾಡದೆ ಐಚ್ಛಿಕ ಮಾಡುವ ಕುರಿತು ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ಪತ್ರ ಬರೆಯಲಾಗಿ ಕೇಂದ್ರ ಸರ್ಕಾರ ಐಚ್ಛಿಕ ಮಾಡಲು ಅವಕಾಶವಿರುವುದಿಲ್ಲ ಎಂದು ತಿಳಿಸಿದ್ದರಿಂದ 2003-04ರ ಮುಂಗಾರು ಹಂಗಾಮಿನಿಂದ ಕಬ್ಬು ಬೆಳೆಯನ್ನು ಬೆಳೆ ವಿಮಾ ಯೋಜನೆಯಿಂದ ಕೈಬಿಡಲಾಗಿದೆ.<br>ಪ್ರಸ್ತುತವಾಗಿ ಕಬ್ಬಿನ ಬೆಳೆಯನ್ನು ಬೆಳೆ ವಿಮೆ ವ್ಯಾಪ್ತಿಗೆ ಒಳಪಡಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ"ಗೆ ನೋಂದಾಯಿಸಲು ಹಾಗೂ ವಿಮಾ ಪರಿಹಾರ ಪಡೆಯಲು ಇರುವ ಮಾನದಂಡಗಳೇನು; ಯಾರು ಮೇಲ್ವಿಚಾರಣೆಯಲ್ಲಿ ನೋಂದಾಯಿಸಲಾಗುವುದು; (ವಿವರ ನೀಡುವುದು) | ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಪ್ರಸಕ್ತ ಹಂಗಾಮಿಗಾಗಿ ಬೆಳೆ ಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುತ್ತದೆ. ಮಂಜೂರಾದ ಬೆಳೆ ಸಾಲದ ಮೊತ್ತದ ಜೊತೆಗೆ ಹೆಚ್ಚುವರಿಯಾಗಿ ರೈತರ ವಿಮಾ ಕಂತನ್ನು ನಿಯಮಾನುಸಾರ ಮಂಜೂರು ಮಾಡಲಾಗುತ್ತದೆ.<br>ಪ್ರಸ್ತುತ ಸಾಲು ಹಾಗೂ ಹಂಗಾಮಿನಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆಯದ ರೈತರು ಯೋಜನೆಯಡಿ ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ಖಾತೆ ಪುಸ್ತಕ/ಪಾಸ್ ಪುಸ್ತಕ/ಕಂದಾಯ ರಶೀದಿಯನ್ನು ಹಾಗೂ ಆಧಾರ್ ಸಂಖ್ಯೆ ನೀಡತಕ್ಕದ್ದು.<br>ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಜಿಲ್ಲಾವಾರು ಹಾಗೂ ಬೆಳೆವಾರು ಅಧಿಸೂಚಿಸಿದ ಕೊನೆಯ ದಿನಾಂಕದೊಳಗೆ ಬೆಳೆ ವಿಮೆಯಡಿ ನೊಂದಣಿ ಮಾಡಿಕೊಳ್ಳಬಹುದು.<br>ಈ ಯೋಜನೆಯಡಿಯಲ್ಲಿ ಬೆಳೆ ಸಾಲ ಪಡೆಯದ ರೈತರು ಅಂದಾಜು/ಉಪೇಕ್ಷಿತ ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲೆ ಪಾಲ್ಗೊಳ್ಳಬಹುದು. ಬೆಳೆ ವಿಮೆಗೆ ನೊಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದಲ್ಲಿ ಯೋಜನೆಯಲ್ಲಿ ಭಾಗವಹಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿದ ಅವಧಿಯೊಳಗಾಗಿ ನೊಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣಪತ್ರ ನೀಡಿ ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸಬಹುದು. ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸುವುದು ಅಥವಾ ಹೆಚ್ಚುವರಿ ವಿಮಾ ಕಂತನ್ನು ಪಾವತಿಸಿದ್ದಲ್ಲಿ ರೈತರಿಗೆ ಮರುಪಾವತಿಸಲಾಗುವುದು.<br>ಬೆಳೆ ವಿಮಾ ಯೋಜನೆಯಡಿ ಕೇಂದ್ರ ಸರ್ಕಾರದ ಮಾಗಸರ್ೂಚಿಯಂತೆ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಂಡುಹಿಡಿಯಲಾದ ವಾಸ್ತವಿಕ ಇಳುವರಿ ಮಾಹಿತಿಯು ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿ ಕೊರತೆಗನುಗುಣವಾಗಿ ಹಾಗೂ ಸದರಿ ವಿಮಾ ಘಟಕದಲ್ಲಿ ವಿಮೆ ಮಾಡಿಸಿದ ವಿಸ್ತೀರ್ಣ ಮತ್ತು ಬಿತ್ತನೆ ವಿಸ್ತೀರ್ಣದ ದತ್ತಾಂಶವನ್ನು ಪರಿಗಣಿಸಿ ವಿಮೆ ವಿಸ್ತೀರ್ಣ ಬಿತ್ತನೆ ವಿಸ್ತೀರ್ಣಕ್ಕಿಂತ ಹೆಚ್ಚಾಗಿದ್ದರೆ.Area Discrepancyfactor(Area insured/Area sown) ತೆಗೆದುಕೊಂಡು ಹೋಬಳಿ/ಗ್ರಾಮ ಪಂಚಾಯತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುತ್ತದೆ. |

| | |
|---|---|
| ಈ) ಸದರಿ ಯೋಜನೆಯಡಿ ಈಗಾಗಲೇ ಯಾವ ಯಾವ ಬೆಳೆಗಳನ್ನು ಸೇರಿಸಲಾಗಿದೆ; ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸರ್ಕಾರ ತೆಗೆದುಕಂಡ ಕ್ರಮಗಳೇನು; (ವಿವರ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿಯಲ್ಲಿ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಹಾರ, ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು ಅಧಿಸೂಚಿಸಲಾದ ಬೆಳೆಗಳ ವಿವರ ಕೆಳಗಿನಂತಿದೆ<br><br>**ಮುಂಗಾರು:** ಭತ್ತ (ನೀರಾವರಿ), ಭತ್ತ (ಮಳೆಆಶ್ರಿತ), ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಜೋಳ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಸಜ್ಜೆ (ನೀರಾವರಿ), ಸಜ್ಜೆ (ಮಳೆಆಶ್ರಿತ), ನವಣೆ (ಮಳೆಆಶ್ರಿತ), ಸಾವೆ (ಮಳೆಆಶ್ರಿತ), ಉದ್ದು (ಮಳೆಆಶ್ರಿತ), ತೊಗರಿ (ನೀರಾವರಿ), ತೊಗರಿ(ಮಳೆಆಶ್ರಿತ), ಹೆಸರು (ಮಳೆಆಶ್ರಿತ), ಹುರುಳಿ(ಮಳೆಆಶ್ರಿತ), ಸೋಯಾಅವರೆ(ನೀರಾವರಿ), ಸೋಯಾಅವರೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆಆಶ್ರಿತ), ಎಳ್ಳು (ಮಳೆಆಶ್ರಿತ), ನೆಲಗಡಲೆ (ಶೇಂಗಾ) (ನೀರಾವರಿ), ನೆಲಗಡಲೆ (ಶೇಂಗಾ) (ಮಳೆಆಶ್ರಿತ), ಅಲಸಂದೆ (ಮಳೆಆಶ್ರಿತ), ಹತ್ತಿ (ನೀರಾವರಿ), ಹತ್ತಿ(ಮಳೆಆಶ್ರಿತ), ಈರುಳ್ಳಿ (ನೀರಾವರಿ), ಈರುಳ್ಳಿ (ಮಳೆಆಶ್ರಿತ), ಆಲೂಗಡ್ಡೆ (ನೀರಾವರಿ), ಆಲೂಗಡ್ಡೆ (ಮಳೆಆಶ್ರಿತ), ಕೆಂಪು ಮೆಣಸಿನಕಾಯಿ (ನೀರಾವರಿ), ಕೆಂಪು ಮೆಣಸಿನಕಾಯಿ (ಮಳೆಆಶ್ರಿತ), ಟೊಮ್ಯಾಟೊ, ಎಲೆಕೋಸು ಮತ್ತು ಅರಿಶಿಣ ಬೆಳೆಗಳನ್ನು ಅಧಿಸೂಚಿಸಲಾಗಿದೆ.<br>**ಹಿಂಗಾರು:** ಭತ್ತ (ನೀರಾವರಿ), ಮುಸುಕಿನಜೋಳ (ನೀರಾವರಿ), ಮುಸುಕಿನಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಜೋಳ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆಆಶ್ರಿತ), ಉದ್ದು (ಮಳೆಆಶ್ರಿತ), ಹುರುಳಿ (ಮಳೆಆಶ್ರಿತ), ಹೆಸರು (ಮಳೆಆಶ್ರಿತ), ಅಗಸೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆಆಶ್ರಿತ), ನೆಲಗಡಲೆ (ಶೇಂಗಾ) (ಮಳೆಆಶ್ರಿತ), ಕುಸುಮೆ (ಮಳೆಆಶ್ರಿತ), ಈರುಳ್ಳಿ (ನೀ), ಆಲೂಗಡ್ಡೆ (ನೀ) ಮತ್ತು ಟೊಮ್ಯಾಟೋ<br><br>**ಬೇಸಿಗೆ:** ಭತ್ತ (ನೀರಾವರಿ), ರಾಗಿ (ನೀರಾವರಿ), ಸೂರ್ಯಕಾಂತಿ(ನೀರಾವರಿ), ನೆಲಗಡಲೆ (ಶೇಂಗಾ) (ನೀರಾವರಿ), ಈರುಳ್ಳಿ (ನೀ) ಮತ್ತು ಟೊಮ್ಯಾಟೋ ಇವುಗಳಲ್ಲಿ ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗಿದೆ.<br><br>ಸದರಿ ಯೋಜನೆಯ ಕುರಿತು ರೈತರಿಗೆ ಮಾರ್ಗದರ್ಶನ ನೀಡಲು ಸ್ಥಳೀಯ ಮತ್ತು ರಾಜ್ಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡುವ ಮುಖೇನ, ಭಿತ್ತಿಪತ್ರಗಳು ಮತ್ತು ಕರಪತ್ರಗಳ ಮೂಲಕ ಮತ್ತು ಎಲ್ಲಾ ತಾಲ್ಲೂಕು. ಹೋಬಳಿ ಮತ್ತು ಗ್ರಾಮಪಂಚಾಯತಿಗಳಲ್ಲಿ ನಡೆಸಲಾಗುವ ಕೃಷಿ ಅಭಿಯಾನ ಕಾರ್ಯಕ್ರಮದ ಮೂಲಕ. ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಸದರಿ ಯೋಜನೆಯ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೇ, ಜಿಲ್ಲಾ, ತಾಲ್ಲೂಕು ಕೃಷಿ ಮತ್ತು ತೋಟಗಾರಿಕೆ ಕಛೇರಿ ಮತ್ತು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡುವ ರೈತರಿಗೆ ಸದರಿ ಯೋಜನೆಯ ಕುರಿತು ಮಾಹಿತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br>ಸದರಿ ಯೋಜನೆಯ ಅನುಷ್ಠಾನದ ಮಾರ್ಗಸೂಚಿ, ಅಧಿಸೂಚನೆ ಇತ್ಯಾದಿ ವಿವರಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಪ್ರಕಟಿಸಲಾಗುತ್ತಿದ್ದು, ಇದರ ಮುಖೇನವೂ ಸಹ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. |

ಉ) ಬೆಳಗಾವಿ ಜಿಲ್ಲೆಯಲ್ಲಿ ಈವರೆಗೆ ಎಷ್ಟು ರೈತರು ಈ ಯೋಜನೆಯಲ್ಲಿ ಹೆಸರು ನೋಂದಾಯಿಸಿದ್ದಾರೆ; (ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು)

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯಡಿಯಲ್ಲಿ ಮುಂಗಾರು 2016 ರಿಂದ ಮುಂಗಾರು 2018ರ ವರೆಗೆ ನೋಂದಾಯಿಸಿದ ರೈತರ ಸಂಖ್ಯೆಯ ತಾಲ್ಲೂಕುವಾರು, ವರ್ಷವಾರು ವಿವರ

| ತಾಲ್ಲೂಕು ಹೆಸರು | ಮುಂಗಾರು 2016 | ಹಿಂಗಾರು 2016 | ಬೇಸಿಗೆ 2016–17 | ಮುಂಗಾರು 2017 | ಹಿಂಗಾರು 2017 | ಬೇಸಿಗೆ 2017–18 | ಮುಂಗಾರು 2018 | ಹಿಂಗಾರು 2018 (04.12.2018 ರ ವರೆಗೆ) |
|---|---|---|---|---|---|---|---|---|
| ಅಥಣಿ | 18109 | 49039 | --- | 2816 | 148 | --- | 9361 | 1433 |
| ಬೈಲಹೊಂಗಲ | 5089 | 46091 | --- | 4999 | 26 | --- | 2459 | 4084 |
| ಬೆಳಗಾವಿ | 6947 | 14172 | --- | 6244 | 13 | --- | 4695 | 102 |
| ಚಿಕ್ಕೋಡಿ | 3080 | 32010 | --- | 93 | 9 | --- | 234 | 194 |
| ಗೋಕಾಕ್ | 3719 | 26654 | --- | 817 | 85 | --- | 2639 | 506 |
| ಹುಕ್ಕೇರಿ | 842 | 26974 | --- | 226 | 3 | --- | 1032 | 222 |
| ಖಾನಾಪುರ | 4288 | --- | --- | 4723 | --- | --- | 3215 | --- |
| ಕಿತ್ತೂರು | 3272 | 852 | --- | 1209 | 1 | --- | 1181 | 10 |
| ನಿಪ್ಪಾಣಿ | 61 | 1550 | --- | 11 | | --- | 184 | 2 |
| ರಾಯಬಾಗ | 455 | 16380 | --- | 197 | 5 | --- | 557 | 45 |
| ರಾಮದುರ್ಗ | 15065 | 40163 | --- | 12845 | 99 | 2 | 20269 | 20629 |
| ಸವದತ್ತಿ | 10066 | 63482 | 2 | 12051 | 81 | --- | 12550 | 10014 |
| **ಒಟ್ಟು** | **70993** | **317367** | **2** | **46231** | **470** | **2** | **58376** | **37241** |

ಊ) 2017–18 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ರೈತರಿಗೆ ಫಸಲ್ ಬಿಮಾ ಯೋಜನೆಯ ಪರಿಹಾರ ನೀಡಲಾಗಿದೆ; ಈ ಯೋಜನೆಯಲ್ಲಿ ಯಾವ ಯಾವ ಬೆಳೆಗಳಿಗೆ ನೀಡಲಾಗಿದೆ? (ವಿವರ ಒದಗಿಸುವುದು)

2017–18 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 3992 ಫಲಾನುಭವಿ ರೈತರಿಗೆ ರೂ. 330.23 ಲಕ್ಷಗಳನ್ನು ಫಸಲ್ ಬಿಮಾ ಯೋಜನೆಯ ಪರಿಹಾರ ನೀಡಲಾಗಿದೆ. 546 ಫಲಾನುಭವಿ ರೈತರಿಗೆ ರೂ.15.24 ಲಕ್ಷಗಳಷ್ಟು, NEFT ತಿರಸ್ಕೃತವಾಗಿ, ಆಧಾರ್ ಸಂಖ್ಯೆ ನೀಡದೇ ಇಲ್ಲದ ರೈತರ ಮೊತ್ತ ಬಾಕಿ ಇರುತ್ತದೆ. ಸದರಿ ಮೊತ್ತವನ್ನು ಸಂಬಂಧಿಸಿದ ಬ್ಯಾಂಕ್‌ಗಳಿಗೆ Bulk payment ಮೂಲಕ ವಿತರಿಸಲು ಕ್ರಮ ವಹಿಸಲಾಗಿದೆ. CSC centres ಗಳ ಮೂಲಕ ನೊಂದಾಯಿಸಿದ ರೈತರ ಸರಿಯಾದ ಖಾತೆ ಸಂಖ್ಯೆ ಸಂಗ್ರಹಿಸಿ ಪರಿಹಾರ ನೀಡಲು ವಿಮಾ ಕಂಪನಿಗಳಿಗೆ ನಿರ್ದೇಶಿಸಲಾಗಿದೆ.

**ಈ ಯೋಜನೆಯಡಿ ಕೆಳಕಂಡ ಬೆಳೆಗಳಿಗೆ ಬೆಳೆ ವಿಮಾ ಪರಿಹಾರ ನೀಡಲಾಗಿದೆ :**

ಜೋಳ (ಮಳೆಆಶ್ರಿತ), ಜೋಳ (ನೀರಾವರಿ), ಸಜ್ಜೆ (ಮಳೆಆಶ್ರಿತ), ಉದ್ದು (ಮಳೆಆಶ್ರಿತ), ಬದನೆ, ಎಲೆಕೋಸು, ಹತ್ತಿ (ಮಳೆಆಶ್ರಿತ), ಹೆಸರು (ಮಳೆಆಶ್ರಿತ), ಹುರುಳಿ(ಮಳೆಆಶ್ರಿತ), ನೆಲಗಡಲೆ (ಶೇಂಗಾ) (ನೀರಾವರಿ), ನೆಲಗಡಲೆ (ಶೇಂಗಾ) (ಮಳೆಆಶ್ರಿತ), ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆಆಶ್ರಿತ), ಭತ್ತ (ನೀರಾವರಿ), ಭತ್ತ (ಮಳೆಆಶ್ರಿತ), ಆಲೂಗಡ್ಡೆ (ಮಳೆಆಶ್ರಿತ), ಸೋಯಾಅವರೆ (ಮಳೆಆಶ್ರಿತ), ಸೂರ್ಯಕಾಂತಿ (ಮಳೆಆಶ್ರಿತ), ಟೊಮ್ಯಾಟೋ, ತೊಗರಿ (ನೀರಾವರಿ), ತೊಗರಿ(ಮಳೆಆಶ್ರಿತ).

2017–18 ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ವಿಮಾ ಪರಿಹಾರ ಇತ್ಯರ್ಥಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

**ಕೃಇ 104 ಕೃಕೈಲು 2018**

(ಎನ್.ಹೆಚ್.ಶಿವಶಂಕರ ರೆಡ್ಡಿ)

ಕೃಷಿ ಸಚಿವರು